# ಕುವೆಂಪು ವಿಶ್ವವಿದ್ಯಾಲಯ

## ಸ್ನಾತಕೊತ್ತರ ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ

ಡಾ. ಎ.ರಾಮೇಗೌಡ
ಪ್ರಾಧ್ಯಾಪಕರು ಮತ್ತು ಅಧ್ಯಕ್ಷರು

ಜ್ಞಾನಸಹ್ಯಾದ್ರಿ, ಶಂಕರಘಟ್ಟ
ಶಿವಮೊಗ್ಗ ಜಿಲ್ಲೆ-577451
ಕರ್ನಾಟಕ ರಾಜ್ಯ

---

ಸಂಖ್ಯೆ:ಕುವಿ:ಸಶಾವಿ: **456** :2015-16 ದಿನಾಂಕ: 19-08-2015

ಗೆ,

1. ಅಧ್ಯಕ್ಷರು, ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ಅಧ್ಯಯನ ವಿಭಾಗ, ಕುವಿವಿ, ಶಂಕರಘಟ್ಟ.
2. ಅಧ್ಯಕ್ಷರು, ಅರ್ಥಶಾಸ್ತ್ರ ಅಧ್ಯಯನ ವಿಭಾಗ, ಕುವಿವಿ, ಶಂಕರಘಟ್ಟ.
3. ಅಧ್ಯಕ್ಷರು, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಕುವಿವಿ, ಶಂಕರಘಟ್ಟ.
4. ಅಧ್ಯಕ್ಷರು, ಸಮಾಜಕಾರ್ಯ ಅಧ್ಯಯನ ವಿಭಾಗ, ಕುವಿವಿ, ಶಂಕರಘಟ್ಟ.
5. ಅಧ್ಯಕ್ಷರು, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ಕುವಿವಿ, ಶಂಕರಘಟ್ಟ.
6. ಅಧ್ಯಕ್ಷರು, ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಕುವಿವಿ, ಶಂಕರಘಟ್ಟ.

ಮಾನ್ಯರೆ,

**ವಿಷಯ:- Census Data Dissemination Workshop-2015 ಕಾರ್ಯಾಗಾರದಲ್ಲಿ ಭಾಗವಹಿಸುವ ಕುರಿತು.**

ಉಲ್ಲೇಖ:- ಜಂಟಿ ನಿರ್ದೇಶಕರು, ಸೆನ್ಸ್‌ಸ್ ಆಪರೇಷನ್ಸ್, ಕರ್ನಾಟಕ, ಬೆಂಗಳೂರು ಇವರ ಪತ್ರದ ದಿನಾಂಕ:10-07-2015.

-**-

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ಜಂಟಿ ನಿರ್ದೇಶಕರು, ಸೆನ್ಸ್‌ಸ್ ಆಪರೇಷನ್ಸ್, ಕರ್ನಾಟಕ, ಬೆಂಗಳೂರು ಇವರು ಪತ್ರಿಸಿ ನಮ್ಮ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ***2011ರ Census Data Dissemination Workshop-2015 ಕಾರ್ಯಾಗಾರ***ವನ್ನು ಆಯೋಜಿಸಿದ್ದು, ಸದರಿ ಕಾರ್ಯಾಗಾರವು ***ದಿನಾಂಕ:26-08-2015ರ (ಬುಧವಾರ) ಬೆಳಗ್ಗೆ 10:30ಗಂಟೆಗೆ ಪ್ರೊ.ಎಸ್.ಪಿ.ಹಿರೇಮಠ ಸಭಾಂಗಣ***ದಲ್ಲಿ ಹಮ್ಮಿಕೊಳ್ಳಲಾಗಿದೆ.

ಸದರಿ ಕಾರ್ಯಾಗಾರವು ಸಮಾಜ ವಿಜ್ಞಾನಗಳ ಸಂಶೊಧನೆಗೆ ಉತ್ತಮ ಮಾಹಿತಿಯನ್ನು ಒದಗಿಸಿರುವುದರಿಂದ ತಮ್ಮ ವಿಭಾಗದಿಂದ **ಆಯ್ದ ಒಟ್ಟು 12 ಜನ (ಸಂಶೋಧನಾ ವಿದ್ಯಾರ್ಥಿಗಳು, ಪ್ರಥಮ ಮತ್ತು ದ್ವಿತೀಯ ವರ್ಷದ ವಿದ್ಯಾರ್ಥಿಗಳು ಸೇರಿ)** ವಿದ್ಯಾರ್ಥಿಗಳನ್ನು ತಮ್ಮ ಶಿಫಾರಸ್ಸಿನ ಪತ್ರದೊಂದಿಗೆ ***ದಿನಾಂಕ:24-08-2015ರ*** ಒಳಗಾಗಿ ಅಧ್ಯಕ್ಷರು, ಸಮಾಜಶಾಸ್ತ್ರ ಅಧ್ಯಯನ ವಿಭಾಗ, ಕುವಿವಿ, ಶಂಕರಘಟ್ಟ ಇಲ್ಲಿ ನೊಂದಾಯಿಸಿಕೊಳ್ಳಲು ಹಾಗೂ ಹೆಸರು ನೊಂದಾಯಿಸಿಕೊಂಡ ವಿದ್ಯಾರ್ಥಿಗಳು **ಕಡ್ಡಾಯವಾಗಿ** ಕಾರ್ಯಾಗಾರದಲ್ಲಿ ಭಾಗವಹಿಸಲು ತಿಳಿಸಲು ಕೋರಿದೆ.

ಸದರಿ ಕಾರ್ಯಾಗಾರಕ್ಕೆ ತಮ್ಮ ವಿಭಾಗದ ಅಧ್ಯಾಪಕರುಗಳೂ ಸಹ ಭಾಗವಹಿಸಬಹುದಾಗಿದೆ. ಹಾಗೂ ಹೆಸರು ನೊಂದಾಯಿಸಿಕೊಂಡು ಭಾಗವಹಿಸುವ ಪ್ರತಿಯೊಬ್ಬರಿಗೂ ಸಹ ***2011ರ*** **Census Dataಕ್ಕೆ ಸಂಬಂಧಪಟ್ಟ ಮಾಹಿತಿಯ ಫೋಲ್ಡರನ ಜೊತೆಗೆ ಪ್ರಮಾಣಪತ್ರ ಒದಗಿಸಲಾಗುವುದು ಹಾಗೂ ಮಧ್ಯಾಹ್ನದ ಊಟದ ವ್ಯವಸ್ಥೆ ಕಲ್ಪಿಸಲಾಗುವುದು** ಎಂಬ ಅಂಶವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ತಮ್ಮ ವಿಶ್ವಾಸಿ

(ಪ್ರೊ.ಎ.ರಾಮೇಗೌಡ)
ಅಧ್ಯಕ್ಷರು
ಸಮಾಜಶಾಸ್ತ್ರ ಅಧ್ಯಯನ ವಿಭಾಗ
ಕುವೆಂಪು ವಿಶ್ವವಿದ್ಯಾನಿಲಯ
ಶಂಕರಘಟ್ಟ-577 451.

ಪ್ರತಿ:

1. ಮುಖ್ಯ ಗ್ರಂಥಪಾಲಕರು, ಗ್ರಂಥಾಲಯ, ಕುವಿವಿ, ಶಂಕರಘಟ್ಟ
2. ಶ್ರೀ.ಶಂಕರಪ್ಪ, ಕಂಪ್ಯೂಟರ್ ಪ್ರೋಗ್ರಾಮರ್, ಗ್ರಂಥಾಲಯ, ಕುವಿವಿ, ಶಂಕರಘಟ್ಟ (ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಕುರಿತು).
3. ಸೂಚನಾ ಫಲಕ
4. ಕಛೇರಿ ಪ್ರತಿ.